OS No. 49/2022

PW-3

**(ಇಂದು ದಿಃ 26-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- 1ನೇ ಪ್ರತಿವಾದಿ ಪರ ಶ್ರೀ. SSA ವಕೀಲರಿಂದಃ-**

ನಿಪಿ-6 ಕಿಂತ ಮುಂಚೆ ಆದ ಮೂಲ ಕ್ರಯ ಕರಾರು ಪತ್ರವನ್ನು ನಾನೇ ತಯ್ಯಾರಿಸಿದ್ದೆ. ಪ್ರತಿವಾದಿಯರಿಗೆ ಹಣದ ತುರ್ತು ಅಗತ್ಯ ಇದ್ದ ಕಾರಣ ನಿಪಿ-6 ರಂತೆ ತರಾತುರಿಯಲ್ಲಿ ನಿಪಿ-6 ಅನ್ನು ತಯ್ಯಾರಿಸಲಾಗಿದೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿ ನಿಪಿ-6 ಅನ್ನು ಬರೆದುಕೊಡುವಾಗ ಅಗ್ರಿಮೆಂಟನಲ್ಲಿ ದಾವಾ ಸ್ವತ್ತಿನ ಬೆಲೆ ಕಡಿಮೆ ಆಗಿದ್ದು ಈಗ ಮಾರುಕಟ್ಟೆಯಲ್ಲಿ ಬೆಲೆ ಜಾಸ್ತಿ ಆಗಿದೆ ಕಾರಣ ಹೆಚ್ಚಿನ ಬೆಲೆಗೆ ಮಾತುಕತೆ ಮಾಡುತ್ತೇವೆ ಎಂದು ಮಾತನಾಡುತ್ತಿದ್ದರು ಎಂದರೆ ಸರಿ. ನಿಪಿ-6 ರಲ್ಲಿ ಪೂರ್ತಿ ಹಣ ಮುಟ್ಟಿದೆ ಎಂದು ಬರೆದಿರುವುದಕ್ಕೆ ಪ್ರತಿವಾದಿ ಒಪ್ಪಿ ಗೆ ಇರಲಿಲ್ಲ ಮುಂದೆ ಮತ್ತೆ  ನೋಡೋಣ ಎಂದು ಸಹಿ ಮಾಡಿದ್ದಾರೆ ಎಂದರೆ ಸರಿ.

**ಪಾಟೀ ಸವಾಲುಃ- 2ನೇ ಪ್ರತಿವಾದಿ ಪರ ಶ್ರೀ. TVP ವಕೀಲರಿಂದಃ-**

ನಿಪಿ-6 ಕ್ಕೆ ಸಹಿ ಮಾಡುವಾಗ ಮೇಲಿನಂತೆ ಪಾರ್ಟಿಗಳು ಮಾತನಾಡುತ್ತಿದ್ದರು. ಆಬಗ್ಗೆ ನಿಪಿ-6 ರಲ್ಲಿ ಉಲ್ಲೇಖ ಮಾಡಿಲ್ಲ, ಮಾರುಕಟ್ಟೆ ಬೆಲೆ ಹೆಚ್ಚಾಗಿರುವ ಸಂಗತಿ ಮಹತ್ವದ ಸಂಗತಿಯಾಗಿದ್ದು ಅದರ ಬಗ್ಗೆ ನಿಪಿ-6 ರಲ್ಲಿ ಉಲ್ಲೇಖ ಮಾಡಬೇಕೆಂದು ನನಗೆ ಅನಸಿಲ್ಲ. ನಿಪಿ-6 ನೋಟರಿ ಆಗಿಲ್ಲ, ಸದರಿ ದಾಖಲಾತಿಯನ್ನು ನೋಟರಿ ಮಾಡಿಸಬೇಕೆಂದು ನನಗೆ ಅನಸಿಲ್ಲ, ನಿಪಿ-6 ನ್ನು ಉದ್ದೇಶಪೂರ್ವಕವಾಗಿ ಸೃಷ್ಟಿಮಾಡಲಾಗಿದೆ ಎಂದರೆ ಸರಿಯಲ್ಲ, ನಿಪಿ-4 ನೋಟರಿ ಆಗಿದೆ. ನೋಟರಿ ಆದಮೇಲೆ ಅದು ನೋಟರಿ ರಿಜಿಸ್ಟರನಲ್ಲಿ ಎಂಟ್ರಿ ಮಾಡಿ ಸದರಿ ರಿಜಿಸ್ಟ್ರನಲ್ಲಿನ ನಂಬರ ಅನ್ನು ದಾಖಲಾತಿ ಮೇಲೆ ಹಾಕಬೇಕಾಗುತ್ತದೆ ಎಂದರೆ ನೋಟರಿ ಅವರು ತಮ್ಮ ರಿಜಿಸ್ಟರನಲ್ಲಿ ಎಂಟ್ರಿ ಮಾಡಿಕೊಂಡಿಲ್ಲ ಕೇವಲ ದಾಖಲಾತಿ ನೋಟರಿ ಮಾಡಿದರು ಎಂದು ಹೇಳುತ್ತಾರೆ . ಯಾವುದೇ ದಾಖಲಾತಿ ನೋಟರಿ ಮಾಡಬೇಕಾದರಿ ನೋಟರಿ ಅವರು ಅದನ್ನು ತಮ್ಮ ರಿಜಿಸ್ಟರನಲ್ಲಿ ಎಂಟ್ರಿ ಮಾಡಬೇಕು ಎಂದರೆ ನನಗೆ ಗೊತ್ತಿಲ್ಲ, ನಿಪಿ-4 ಅನ್ನು ದಿಃ 29-05-2014 ರಂದು ಬರೆದುಕೊಟ್ಟಿಲ್ಲ ಕಾರಣ ಅದು ನೋಟರಿ ರಜಿಸ್ಟರನಲ್ಲಿ ಎಂಟ್ರಿ ಮಾಡಿಸಿಲ್ಲ ಎಂದರೆ ಸರಿಯಲ್ಲ, ನಿಪಿ-4 ಅನ್ನು ಉದ್ದೇಶಪೂರ್ವಕವಾಗಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ

OS No. 49/2022

PW-3

ನನ್ನ ಮುಂದೆ ವ್ಯವಹಾರದ ಮಾತುಕತೆ ಆಗಿಲ್ಲ ಎಂದರೆ ಸರಿಯಲ್ಲ. 1ನೇಪ್ರತಿವಾದಿ ಗಂಡ ದೇವಿಂದ್ರಪ್ಪ ಮತ್ತು ನಾನು ಸ್ನೇಹಿತರು ಎಂದರೆ ಸರಿ. ಕಾರಣ ಅವರಿಗೆ ಅನುಕೂಲ ಮಾಡುವ ಕಾರಣ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-4 ಮತ್ತು 6 ನ್ನು ತಯ್ಯಾರಿಸಲು ನನಗೆ 1ನೇ ಪ್ರತಿವಾದಿ ಮಾಹಿತಿ ನೀಡಿಲ್ಲ ಮತ್ತು ನಾನು ನಿಪಿ-4 ಮತ್ತು 6 ನ್ನು ತಯ್ಯಾರಿಸಿಲ್ಲ ಕೇವಲ ಸದರಿ ದಾಖಲಾತಿಗಳಿಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು 1ನೇ ಪ್ರತಿವಾದಿಯ ಗಂಡನ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**